ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧	ಬೆಂಗಳೂರು, ಮಂಗಳವಾರ, ೨೮, ಏಪ್ರಿಲ್, ೨೦೨೬ (ವೈಶಾಖ, ೦೮, ಶಕವರ್ಷ, ೧೯೪೮)	ಸಂಚಿಕೆ ೭೮
Volume - 161	BENGALURU, TUESDAY, 28, APRIL, 2026 (VAISHAKHA , 08, SHAKAVARSHA, 1948)	Issue 78

ಭಾಗ ೬

ಬೆಂಗಳೂರು ವಿಭಾಗಕ್ಕೆ ಮತ್ತು ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ತುಮಕೂರು, ಚಿತ್ರದುರ್ಗ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು

ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 26 ಎಕ್ಯೂಜಿಯು 2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಡಾII. ಬಿ. ಆರ್. ಅಂಬೇಡ್ಕರ್ ವೀದಿ
ಬೆಂಗಳೂರು, ದಿನಾಂಕ:21.04.2026.

ಅಧಿಸೂಚನೆ

ಸಣ್ಣ ನೀರಾವರಿ ಯೋಜನೆಯಡಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣಕ್ಕಾಗಿ ಕಲಬುರಗಿ ಜಿಲ್ಲೆ ಹಾಗೂ ತಾಲ್ಲೂಕಿನ ಕವಲಗಾ(ಕೆ) ಗ್ರಾಮದ ಒಟ್ಟು 03ಎ-25ಗು ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲು "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013"ರ ಕಲಂ-19(7) ರಡಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಪ್ರಕರಣದಲ್ಲಿ ಕಲಂ-19(1)ರ ಅಂತಿಮ ಅಧಿಸೂಚನೆಯನ್ನು ಹೊರಡಿಸಲು ದಿನಾಂಕ: 17.01.2026 ರಿಂದ 17.08.2026 ರವರೆಗೆ ಕಾಲಾವಧಿಯನ್ನು ವಿಸ್ತರಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇಣುಕ. ಬಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ-1&3)

PR-396

ಕರ್ನಾಟಕ ಸರ್ಕಾರ
ಕಂದಾಯ ಇಲಾಖೆ
ಭೂಸ್ವಾಧೀನ ಕಾಯ್ದೆಯ ಕಲಂ-19(1) ರೊಂದಿಗೆ ಓದಲಾದ ಪ್ರಕರಣ 19(2) ರ ಅನ್ವಯ ಘೋಷಣೆ

ಸಂಖ್ಯೆ: ಆರ್‌ಡಿ 26 ಎಕ್ಯೂಜಿಯು 2025 **ದಿನಾಂಕ: 28.04.2026**

ಸಾರ್ವಜನಿಕ ಉದ್ದೇಶದ ಅಂದರೆ ಕಲಬುರಗಿ ಜಿಲ್ಲೆಯ ಕಲಬುರಗಿ ತಾಲ್ಲೂಕಿನ ಕವಲಗಾ (ಕೆ) ಗ್ರಾಮದ ಜಮೀನುಗಳು ಸಣ್ಣ ನೀರಾವರಿ ಯೋಜನೆಯಡಿ ಬ್ರಿಡ್ಜ್-ಕಂ-ಬ್ಯಾರೇಜ್ ನಿರ್ಮಾಣಕ್ಕಾಗಿ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆ ಕಂಡುಬಂದಿದ್ದರಿಂದ ಹಾಗೂ ಈ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ, ದಿನಾಂಕ:23-07-2019 ರಿಂದ ಜಾರಿಗೆ ಬಂದಿರುವ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019 (2019ರ ಕರ್ನಾಟಕ ಅಧಿನಿಯಮ ಸಂಖ್ಯೆ-16 ರ ಕಲಂ-10(ಎ) ರಡಿ ಮೂಲಕ ಕಾಯ್ದೆಯ ಅಧ್ಯಾಯ-II & III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ವಿನಾಯಿತಿ ಸಂಖ್ಯೆ: ಆರ್‌ಡಿ 26 ಎಕ್ಯೂಜಿಯು 2025, ದಿನಾಂಕ: 09.05.2025 ರ ಸರ್ಕಾರದ ಅಧಿಸೂಚನೆಯನ್ನು ಹೊರಡಿಸಿದ್ದರ ಮೇರೆಗೆ 2013ರ ಮೂಲ ಕಾಯ್ದೆಯ ಕಲಂ-11(1)ರಡಿ ಕ್ರಮಾಂಕ: ಕಂ/ ಭೂಸ್ವಾ /ಜಿಅಕ/53/2024-25 ದಿನಾಂಕ: 06-01-2025 ರಲ್ಲಿ ಅನುಮೋದಿಸಿದ್ದು, ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 17.01.2025ರಂದು ಪ್ರಕಟಿಸಿದಂತೆ ಕಲಂ-15(1)ರನ್ವಯ ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ/ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಆಲಿಸಿದ ನಂತರ ಹಾಗೂ ಸೂಕ್ತ ವಿಚಾರಣೆಯನ್ನು ನಡೆಸಿದ ನಂತರ ವಿಚಾರಣೆ ವರದಿಯನ್ನು ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 26 ಎಕ್ಯೂಜಿಯು 2025, ದಿನಾಂಕ: 21.04.2026 ರಲ್ಲಿ ಒಪ್ಪಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರೆಸಲು ನಿರ್ದೇಶನ ನೀಡಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ಕಲಂ-19(1)ರಡಿ ಕೆಳಗೆ ಸೂಚಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಅಗತ್ಯವಿದೆಯೆಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ ಮೇಲೆ ತಿಳಿಸಿರುವ ಉದ್ದೇಶಕ್ಕೆ ಜಮೀನುಗಳು ಅಗತ್ಯವಾಗಿವೆಯೆಂದು ಸದರಿ ಅಧಿನಿಯಮದ 19(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್‌ಡಿ 26 ಎಕ್ಯೂಜಿಯು 2025, ದಿನಾಂಕ: 09.05.2025 ರನ್ವಯ ಸದರಿ ಯೋಜನೆಗೆ 2013ರ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಉಪಭಂದಗಳನ್ನು ಅನ್ವಯಿಸುವುದರಿಂದ ವಿನಾಯಿತಿ ನೀಡಲಾಗಿರುವುದರಿಂದ 2013ರ ಮೂಲ ಕಾಯ್ದೆಯ ಅಧ್ಯಾಯ-II & III ರಲ್ಲಿನ ಪುನರ್‌ವಸತಿ ಮತ್ತು ಪುನರ್ ನಿರ್ಮಾಣಗಳ ಬದಲಾಗಿ ನೀಡಲಾಗುವ ಒಂದು ಇಡಿಗಂಟು ಮೊತ್ತವನ್ನು "ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್ ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ನಿಯಮಗಳು 2020"ರ ನಿಯಮ 29(5) ರಂತೆ ನಿಗದಿಪಡಿಸಲು ತೀರ್ಮಾನಿಸಲಾಗಿದೆ.

ಈ ಮೇಲಿನ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಸದರಿ ಅಧಿನಿಯಮದ ಕಲಂ-21(1)ರಡಿ ಸಂಬಂಧಿಸಿದ ಹಿತಾಸಕ್ತಿದಾರರಿಗೆ ಭೂಸ್ವಾಧೀನತೆಯ ಜಮೀನುಗಳ ಕಬ್ಜಾ ಪಡೆಯುವ ಉದ್ದೇಶದ ಬಗ್ಗೆ ಹಾಗೂ ಪರಿಹಾರದ ಕ್ಲೇಮುಗಳನ್ನು ಸಲ್ಲಿಸಲು ತಿಳುವಳಿಕೆಯ ನೋಟಿಸು ನೀಡಿ ಮುಂದಿನ ಕ್ರಮಜರುಗಿಸಲು ನಿರ್ದೇಶಿಸಿದೆ.

ಸದರಿ ಅಧಿಸೂಚನೆಯಲ್ಲಿ ಒಳಪಡುವ ಜಮೀನುಗಳ ವಿವರಗಳನ್ನು ಸೂಚಿಸುವ ಒಂದು ನಕ್ಷೆಯನ್ನು ಸಾರ್ವಜನಿಕರ ಹಿತಾಸಕ್ತಿಗಾಗಿ ಹಾಗೂ ಸಂಬಂಧಿಸಿದ ಎಲ್ಲಾ ಹಿತಾಸಕ್ತಿದಾರರ ಅವಗಾಹನೆಗಾಗಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಸಣ್ಣ ನೀರಾವರಿ ಯೋಜನೆ, ಕಲಬುರಗಿ ಇವರ ಕಾರ್ಯಾಲಯದಲ್ಲಿ ಇಡಲಾಗಿದೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

::ಅನುಸೂಚಿ::

ಜಿಲ್ಲೆಃ ಕಲಬುರಗಿ **ತಾಲ್ಲೂಕು: ಕಲಬುರಗಿ** **ಹೋಬಳಿಃ ಫರತಾಹಬಾದ** **ಗ್ರಾಮ: ಕೌವಲಗಾ (ಕೆ)**

ಕ್ರ ಸಂ.	ಭೂಮಾಲೀಕರ ಹೆಸರು	ಅನುಭವದಾರರ ಹೆಸರು	ಸರ್ವೆ ನಂಬರ		ಭೂಸ್ವಾಧೀನಕ್ಕೆ ಒಳಪಡುವಒಟ್ಟುವಿಸ್ತೀರ್ಣಕಲಂ 11(1) ರನ್ವಯ		ತರಹೆ	ಭೂಸ್ವಾಧೀನಕ್ಕೆ ಒಳಪಡುವ ಒಟ್ಟು ವಿಸ್ತೀರ್ಣ		ತರಹೆ	ಚಕ್ಕು ಬಂದಿ				ಭೂಸ್ವಾಧೀನಕ್ಕೆ ಒಳಪಡುವ ಒಟ್ಟು ವಿಸ್ತೀರ್ಣ		ಮರಗಳ ವಿವರ	ಮರಗಳ ಸಂಖ್ಯೆ	ಮಾಲೀಕ/ಮಕ್ಕಳ ವಿವರಗಳು	ಷರಾ
			ಸರ್ವೆ ನಂಬರ 11(1)ರ ಪ್ರಕಾರ	ಸರ್ವೆ ನಂಬರ ಜೆಎಂಸಿ ಪ್ರಕಾರ	ಕೃಷಿ	ಖರಾಬು		ಕೃಷಿ	ಖರಾಬು		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ ಎ-ಗುಂ.	ಆಕಾರರೂ. ಪೈ				
1	2	3	4	5	6	7	8	6	7	8	9	10	11	12	13	14	15	16	17	18
1	ಗೀನಾಬಾಯಿ ಕೋಂ ರಾಣೋಜಿ		1/*/4	1/4	0-15	-	ಖುಷ್ಕಿ	-	-	-	18, 19	1/3	4	ಗ್ರಾಮ	-	-	-	-	-	ಪ್ರಕಟಿಸಿದೆ ಪರಿಣಮಿಸಿಲ್ಲ
2	ಹಜರತಗೌಮ ಅಲಿ ಪೀರ ದರ್ಗಾ		18/*/*	18/*	0-35	-	ಖುಷ್ಕಿ	-	0-35	ಖುಷ್ಕಿ	16,20	1/4, 19	17	ರಸ್ತೆ, 26/1	0-35 ಪಿಕೆ	-	-	-	-	-
3	ಸತೀಶ ಬಿನ್ ರಾಣೋಜಿ		19/*/*	19/*	0-20	-	ಖುಷ್ಕಿ	0-02	-	ಖುಷ್ಕಿ	1/4	ಗ್ರಾಮ	1/4, 18	ಗ್ರಾಮ ರಸ್ತೆ	0-02	0.14	-	-	-	-
4	ಪರ್ವತ @ ಪರ್ವತರೆಡ್ಡಿ ಬಿನ್ ಷಣ್ಮುಖಪ್ಪ		20/*/*	20/*	1-10	-	ಖುಷ್ಕಿ	00-08	0-38	ಖುಷ್ಕಿ	21/1	19	ಸರಕಾರಿ ರಸ್ತೆ	26/1	0-08 0-38 ಪಿಕೆ	0.35	-	-	-	-
5	ಪರ್ವತ @ ಪರ್ವತ ರಡ್ಡಿ ಬಿನ್ ಷಣ್ಮುಖಪ್ಪ		21/*/1	21/1	0-10	-	ಖುಷ್ಕಿ	-	-	-	21/2	20	ಸರಕಾರಿ ರಸ್ತೆ	26	-	-	-	-	-	ಪ್ರಕಟಿಸಿದೆ ಪರಿಣಮಿಸಿಲ್ಲ
6	ಹಿರಾಬಾಯಿ ಗಂಡ ಗೌಡಪ್ಪ ಸುನೀತಾ ಗಂಡ ಶರಣಗೌಡ ಪಾಟೀಲ ಲಲಿತಾಬಾಯಿ ಗಂಡ ಷಣ್ಮುಖಪ್ಪ ಪಾಟೀಲ		26/*/1	26/1	0-15	-	ಖುಷ್ಕಿ	00-03	0-12	ಖುಷ್ಕಿ	26/2ಬಿ	ಗ್ರಾಮ	20	26/1	0-03 0-12 ಪಿಕೆ	0.18	-	-	-	-
				ಒಟ್ಟು		-	-	**00-13**	**02-05**	-	-	-	-	-		-	-	-	-	-

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ರೇಣುಕ. ಬಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂಸ್ವಾಧೀನ-1 & 3)

PR-397

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–೫೬೯.

THAMMAIAH